ದಿನಾಂಕಃ 13.04.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಅವರಿಂದ –</u>**

1. ನನ್ನ ಹೆಸರು ನಾಗರಾಜೇಗೌಡ . ನನಗೆ ಓದು ಬರಹ ಬರುತ್ತದೆ. ನಾನು ದೊಡ್ಡೇಗೌಡನ ಕೊಪ್ಪಲಿನಲ್ಲಿ 48 ವರ್ಷಗಳಿಂದ ವಾಸವಾಗಿದ್ದೇನೆ. ನನ್ನ ಹುಟ್ಟೂರು ಹೊಸೂರು. ನಾನು ಹೊಸೂರಿನಲ್ಲಿ ಹುಟ್ಟಿದ್ದೆ ನನ್ನ ಬಳಿ ದಾಖಲೆ ಶಾಲಾ ದಾಖಲಾತಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ದಾಖಲಾತಿ ಇಲ್ಲ , ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. 1 ನೇ ವಾದಿ ಸುಂದರಮ್ಮ ನನ್ನ ಅಕ್ಕ, 2 ನೇ ವಾದಿ ಭಾಸ್ಕರ ನನ್ನ ಅಕ್ಕನ ಮಗ. ನನಗೆ 56 ವರ್ಷ ವಯಸ್ಸು. ತಿಮ್ಮೇಗೌಡ ಹಾಗೂ 1 ನೇ ವಾದಿ ಸುಂದರಮ್ಮ ಅವರ ಮದುವೆ ಮುಂಚೆ ಅವರ ಕುಟುಂಬದಲ್ಲಿ ಏನು ವ್ಯವಹಾರ ನಡೆದಿರುತ್ತದೆ ನನಗೆ ಗೊತ್ತಿದೆ. ತಿಮ್ಮೇಗೌಡ ತಂದೆ ಹೆಸರು ತಮ್ಮೇಗೌಡ್ಡ ಅವರ ತಂದೆ ಹೆಸರು ಅಪ್ಪಾಜೀಗೌಡ. ಅಪ್ಪಾಜೀಗೌಡರ ಹೆಂಡತಿ ಹೆಸರು ಗೊತ್ತಿಲ್ಲ. ತಮ್ಮೇಗೌಡ್ಡ ಅವರ ಹೆಂಡತಿ ಹೆಸರು ಸುಬ್ಬಮ್ಮ.

3. ಸುಬ್ಬಮ್ಮ ಮದುವೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸುಬ್ಬಮ್ಮ ಅವರು ಕೆ.ಆರ್. ನಗರದ ಅರ್ಜುನಹಳ್ಳಿಯವರು. ಸುಬ್ಬಮ್ಮ ಯಾರ ಮಗಳು ಎಂದರೆ ಗೊತ್ತಿಲ್ಲ. ಸದರಿ ಸುಬ್ಬಮ್ಮ ಅವರು ಹೊನಕೆರೆಗೌಡರನ್ನು ಮದುವೆ ಆಗಿದ್ದರು ಎಂದರೆ ಸರಿಯಲ್ಲ. ಸದರಿಯವರಿಗೆ ರಾಮಕೃಷ್ಣೇಗೌಡ ಮಗ ಇದ್ದಾನೆ ಎಂದರೆ ಸರಿಯಲ್ಲ. ಸುಬ್ಬಮ್ಮ ಅವರ ಮದುವೆ ಬಗ್ಗೆ ನನಗೆ ಗೊತ್ತಿಲ್ಲದೆ ಇರುವುದರಿಂದ ಅವರ ಕುಟುಂಬದ ವಿಚಾರ ಕೂಡ ನನಗೆ

ಗೊತ್ತಿಲ್ಲ ಎಂದರೆ ನಾನು 2 ನೇ ತರಗತಿ ಓದುವಾಗ ಸುಬ್ಬಮ್ಮ ಅವರಿಗೆ 50-55 ವರ್ಷ ಆಗಿತ್ತು ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

4. ವಾದಿಯರು ಒಟ್ಟು 11 ಜನರ ಮೇಲೆ ದಾವೆ ಸಲ್ಲಿಸಿರುತ್ತಾರೆ. ವಾದಿಯರು ಯಾವ ಯಾವ ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. 2 ನೇ ವಾದಿ ಭಾಸ್ಕರ ಮಾರಾಟ ಮಾಡಿರುವ ಜಮೀನಿನ ಬಗ್ಗೆ ಗೊತ್ತಿಲ್ಲ. ನಾನು ವಾದಿಯರಿಗೆ ಸಂಬಂಧಿಕನಾಗಿದ್ದು ಅವರು 10 ಐಟಂ ಆಸ್ತಿಗಳನ್ನು ಮಾರಾಟ ಮಾಡಿದ್ದು ಅದರ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಅವರು ಮಾರಾಟ ಮಾಡಿರುವ ಎಲ್ಲಾ ಪತ್ರಗಳಿಗೆ ನಾನೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ವಾದಿಯೊಂದಿಗೆ ಶಾಮೀಲಾಗಿ ಪ್ರತಿವಾದಿಯರ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ದೊಡ್ಡೇಗೌಡನ ಕೊಪ್ಪಲಿನಲ್ಲಿ ವಾಸವಿರುವುದರಿಂದ ಹೊಸೂರಿನ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಹೊಸೂರಿನಲ್ಲಿ ವಾದಿ ಪರ ಸಾಕ್ಷಿ ಹೇಳಲು ಯಾರು ಇಲ್ಲದೆ ಇರುವುದರಿಂದ ನಾನು ನನ್ನ ಅಕ್ಕ ಹಾಗೂ ಅವರ ಮಗನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಹುಣಸೂರು.